REVIEW OF RESEARCH
IMPACT FACTOR : 5.2331 (UIF) UGC APPROVED JOURNAL NO. 48514 ISSN: 2249-894X
VOLUME - 7 | ISSUE - 7 | APRIL - 2018

# ಜನಪದ ಹಾಡಿನಲ್ಲಿ ಶಿಶು ಪ್ರಾಸಗಳು



**ಡಾ. ಸುವರ್ಣ ಎಂ. ಹಿರೇಮಠ**
**ಕನ್ನಡ ಉಪನ್ಯಾಸಕರು**
ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು
ಜೇವರ್ಗಿ ಕಾಲೋನಿ ಕಲಬುರಗಿ.

ಜನಪದ ಸಾಹಿತ್ಯದಲ್ಲಿ ಶಿಶು ಪ್ರಾಸಗಳು ಅಥವಾ ಮಕ್ಕಳ ಹಾಡುಗಳು ಒಂದು ಬಹುಮುಖ್ಯ ಪ್ರಕಾರ. ಸಾರವತ್ತಾದ ಭಾಗ ಕೂಡ. ಈ ಶಿಶು ಪ್ರಾಸಗಳು ಯಾವಾಗ ಯಾರಿಂದ ಹುಟ್ಟಿದವು ಎಂಬ ಪ್ರಶ್ನೆಗೆ ಖಚಿತವಾದ ಉತ್ತರ ಹೇಳುವುದು ಕಷ್ಟದ ಕೆಲಸ. ಅನಕ್ಷರಸ್ಥ ಸಮಾಜದಲ್ಲಿ ಮೌಖಿಕ ಪರಂಪರೆಯಲ್ಲಿ ಹುಟ್ಟಿ ಬೆಳೆದು, ಅನಂತ ಕಾಲದಿಂದಲೂ ಅವು ಶಿಶು ಸಂಸ್ಕೃತಿಯ ಅಂಗವಾಗಿ ಸಾಮಾಜಿಕ ನಡಾವಳಿ, ರೀತಿ ನೀತಿಗಳನ್ನು ತುಂಬಾ ಸೊಗಸಾಗಿ ಪರಿಚಯಿಸುವ ರೀತಿಯಲ್ಲಿ ಬೆಳೆದು ಬಂದಿವೆ.

ಮಕ್ಕಳ ಜನಪದ ಹಾಡಿನ ಸೊಬಗು, ಸೊಗಸು ಹುಲುಸಾಗಿ ಬೆಳೆದು ಉಳಿದು ಬಂದಿದೆ. ಹೆಚ್ಚಾಗಿ ಹಳ್ಳಿಗಾಡಿನಲ್ಲಿ,

ಯವ್ವಾ ಯವ್ವಾ ಗೆಣಸS
ಕುಳ್ಯಾಗ ಹಾಕಿ ಕುದಿಸS
ಕರೆ ಸೀರೆ ಉಡಿಸS
ಗಂಡನ ಮನಿಗೆ ಕಳಸS

ಈ ಪಲ್ಲವಿಯ ನಂತರ ಮಕ್ಕಳ ಹಿ ಹಿ ಹಿ ಹಿ ಕಿಲ ಕಿಲ ನಗುವೇ ನಗುವು. ಇದೊಂದು ಒಗಟಾಗಿರುವುದೇನೋ, ಹೆಣ್ಣು ಹುಡಗಿಯರು ಮಾತ್ರ. ಈ ಮಾತಿನ ಮಾಲೆಯನ್ನು ಹೆಣೆದು, ದಣಿದು, ನುಡಿದು ನಕ್ಕು ನಲಿಯುವರು.

ಮಕ್ಕಳಿಗೆ ಹಾಡುವುದೆಂದರೆ ಹಿಗ್ಗು, ಹಾಡುತ್ತಾ ಆಡುವುದು ಅವರ ಹುಟ್ಟು ಗುಣ. ಅವರು ಹಾಡುವ ಪದಗಳು, ಪೋಣಿಸುವ ನುಡಿ ಮುತ್ತುಗಳು ಅವರ ಹುಟ್ಟಿನೊಂದಿಗೆ ಗಟ್ಟಿಗೊಂಡೇ ಬಂದಿವೆ. ಪರಂಪರೆಯಿಂದ ಬಂದ ಮಕ್ಕಳ ಜನಪದ ವಾಣಿ ಬತ್ತದ ಹೊಳೆಯಂತೆ ಎಂದೆಂದಿಗೂ ಹರಿಯುವುದು.

ಪ್ರತಿದಿನ ಸಾಲಿ ತಪ್ಪಿಸಿ ಓಡಾಡುವ ಆರು ವರ್ಷದ ಮಗು ತನ್ನ ಓಣಿಯಲ್ಲಿಯ ತನ್ನ ಹಾಗೆಯೇ ಸಾಲಿ ತಪ್ಪಿಸಿ ತಿರುಗುವ ಬಳಗವನ್ನು ಒಂದೇ ಕಡೆ ಕೂಡಿಸಿ, ತಾನೇ ಆ ತರಗತಿಯ ಮಾಸ್ತಾರನಾಗಿ, ಪಾಠ ಕಲಿಸುವುದನ್ನು, ಬಾಲಕರನ್ನು ಬೆದರಿಸುವುದನ್ನು, ಠೀವಿಯಿಂದ ಗತ್ತಿನಿಂದ ತರಗತಿಯಲ್ಲಿ ತಿರುಗುವುದನ್ನು ಅನೇಕ ಕಡೆಗಳಲ್ಲಿ ನೋಡುತ್ತೇವೆ. ಅವರು ಹೇಳುವ ಹಾಡುಗಳು ಅವರವರ ಭಾವಕ್ಕೆ ತಕ್ಕ ಹಾಗೆ ಆಗಿಂದಾಗ್ಗೆ ರಚಿತವಾದವುಗಳು.

ಸಾಲಿ ಬಿಟ್ಟು ಸರಿ ಹೋತ್ತಾಯ್ತು
ಮಂಗ್ಯಾ ಬಂದು ಬಾಳೊತ್ತಾಯ್ತು
ಈ ಪಲ್ಲವಿಯೊಡನೆ ಅನ್ನುತ್ತಾ ಕುಣಿಯುವರು ಮಕ್ಕಳು, ನಂತರ

ಮಾಸ್ತರೊಬ್ರು ಬಂದಾರS
ಸಾಲಿಗೆ ಬಾ ಅಂತಾರS
ರ ಠ ಈ ಕ ಹೇಳ್ತಾರS
ಬೆತ್ತದ ಏಟಾ ಕೊಡತಾರS
ಈ ಹೊಸ ಪದ ಹೆಣೆದು ಕುಣಿ ಕುಣಿದು ಹಾಡುವುದುದರಲ್ಲಿ ಎಳೆಯ ಮಕ್ಕಳಿಗೆ ಬಲು ಹುಮ್ಮಸ್ಸು

ಪುಟ್ಟ ಮಕ್ಕಳ ಸೃಷ್ಟಿ ತುಂಬಾ ಭಾವಪೂರ್ಣವಾದುದು. ಅವರು ಏನೆಲ್ಲವನ್ನು ಕಲ್ಪಿಸಿ, ರಚಿಸಿ ಆಡಬಲ್ಲರು; ಆಡಿಸಲೂ ಬಲ್ಲರು. ಐದಾರು ವರುಷದ ಬಾಲೆಯೋರ್ವಳು ತನ್ನ ಕೈಗೂಸಾದ ಬಣ್ಣದ ಗೊಂಬೆಯನ್ನು ಮುದ್ದಿಸಿ, ಲಾಲಿಸಿ ರಮಿಸುವ ಧಾಟಿ ಹಾಗೂ ರಾಗದ ಮೋಹಕತೆ ಈ ರೀತಿಯಾಗಿದೆ.

ಅಳಬ್ಯಾಡ ಗೊಂಬವ್ವS
ಅಳ್ಳಿಟ್ಟು ಕೊಡತೀನಿ ॥ ಪಲ್ಲವಿ ॥

ಗೊಂಬವ್ವ ನನ ಕೂಸು
ಚಂದುಳ್ಳ ನನ ಕಂದS
ಅಂದದ ಅಂಗೀಯS
ಕಂದSಗ ತೊಡಸೀನಿ
ಹಾಲ್ಗಡಗ ಇಡೀಸೀನಿ
ಕಾಡೀಗಿ ಹಚ್ಚೀನಿ

ಈ ರೀತಿಯಾಗಿ ಆ ಗೊಂಬೆ, ಹೆಣ್ಣು ಕೂಸಾಗಿ, ಗಂಡುಮಗುವಾಗಿ, ಬಹುರೂಪಿಯಾಗಿ ತೋರುತ್ತದೆ. ಮಗುವಿಗೆ, ತನ್ನ ತಾಯಿ ಆಡಿಸಿ ಹಾಡುವ ರೀತಿಯಿಂದ ಕಲಿತ ಪಾಠದ ಅಣುಕು ನುಡಿಗಳನ್ನು ಸ್ಮರಿಸಿ ಆನಂದಿಸುವಂತಿದೆ ಮಗು.

'ಪುಟ್ಟಾಣಿ ಪಾರಿಂವಾ ಎಷ್ಟಾರೆ ಅಳತಾನ
ಹಟಮಾರಿ ಬಾಲಗ ಏನಾರೆ ಮಾಡಲಿ?'

ಎಂದು ಬೇಸರದ ದನಿಯ ಉಸಿರು ಬಿಡುತ್ತದೆ ಆ ಮಗು. ಆ ಮಗುವಿನ ಗಂಡು ಗೊಂಬೆ (ಅದು ಅವಳ ಮಗು).

ಪುಟ ಚೆಂಡು ಬೇಕಂತ ಹಟಮಾಡಿ ಅಳತಾನ
ಕಾಲ್ಗೆಜ್ಜೆ ಬೇಕಂತ ಕುಣಿದಾಡಿ ಅಳತಾನ
ಚಿಣಿ ದಾಂಡು ಬೇಕಂತ ಚೀರಾಡಿ ಅಳತಾನ
ಉಡುದಾರ ಬೇಕಂತ ಉರುಳಾಡಿ ಅಳತಾನ
ಎಂದು ಅವಳು ತನ್ನ ಓರಿಗೆಯ ಸಖಿಯರಿಗೆ ಹೇಳಕೊಳ್ಳುವ ಬಗೆಯಿದು.

'ಕೂಸು ಕಂಡಿರೇನ'S
ಔನನ್ನ ಬಾಲSನS ಕಂಡಿರೇನುS ॥ ಪಲ್ಲವಿ॥

ಎಂದು ಕಳೆದುಕೊಂಡ ತನ್ನ ಕೂಸಿಗಾಗಿ ಹಲುಬುತ್ತಿದೆ ತಾಯಿ ಮಗು ತನ್ನ ಮುದ್ದಾದ ಮಗುವಿನ ಕುರುಹೇನು? ಅವಳಿಂದಲೇ ಅರಿತು ಕೊಳ್ಳುವ ಸಂದರ್ಭ.

ಹಸಿರಂಗಿ ತೊಡಸಿದ್ದೆ
ಹಾಲ್ಗಡಗ ಇಡಿಸಿದ್ದೆ
ಹೆರಳ್ಹಾಕಿ ಹೂವ ಮುಡಿಸಿದ್ದೆನವ್ವಾS
ಕೂಸು ಕಂಡಿರೇನ.... S
ಎಣ್ಣೆಚ್ಚಿ ಎರೆದಿದ್ದೆ
ಬೆಣ್ಣೆರೊಟ್ಟಿ ಕೊಟ್ಟಿದ್ದೆ
ಕಣ್ಣಿಗೆ ಕಾಡಿಗೆ ಹಚ್ಚಿದ್ದೆನವ್ವಾ... S
ಕೂಸು ಕಂಡಿರೇನ.... S

ಗುಂಗುರ ಗೂದಲು
ಉಂಗುರ ಉಡದಾರ
ಬಂಗಾರ ಬಣ್ಣದ ಬಾಲಕನಪ್ಪಾ
ಕೂಸು ಕಂಡಿರೇನ.... S

ಇದೇ ರೀತಿ ತನ್ನ ಮಗುವಿನ ರೂಪು ಲಾವಣ್ಯ, ನಯ–ವಿನಯ, ನಡೆ–ನುಡಿಗಳನ್ನು ವರ್ಣಿಸುತ್ತ ಹಾಡುವ ಬಾಲೆಯ ಅಂತಃಕರಣದ ಆರ್ತನಾದ ಕೇಳಿ ಗೊಂಬೆಯನ್ನು ತಂದೊಪ್ಪಿಸುತ್ತಾರೆ ಗೆಳತಿಯರು. ಇದು ಕೂಸು ಕಳೆದುಕೊಂಡ ತಾಯಿಯ ಕಳಕಳಿಯ ಕೋರಿಕೆ. ಹತ್ತಾರು ಹುಡುಗಿಯರು ಕೂಡಿ ಆಡುವ ಈ ಆಟದಲ್ಲಿ ಹಿರಿಯಮಣಿಯಾದ ರಸಿಕಳೇ ತಾಯಿಯಾಗಿ ಹಾಡು ಹೇಳುತ್ತಾಳೆ. ಉಳಿದವರು ಕೇಳುತ್ತ ಕಳವಳಪಡುತ್ತಾರೆ. ಮಗು ಸಿಕ್ಕೊಡನೆ ಅವರ ಆಟ ನಗೆಯೊಂದಿಗೆ ಮುಕ್ತಾಯವಾಗುತ್ತದೆ. ಈ ಹಾಡು ಹಳ್ಳಗಾಡಿನಲ್ಲಿ ಜನಪ್ರಿಯವಾದುದಾಗಿತ್ತು.

ಸಾಯಂಕಾಲ ಬೆಳಂದಿಗಳನ ದಿನಗಳಲ್ಲಿ ಮಕ್ಕಳ ಸಾಮೂಹಿಕ ಆಟ ನೋಡಬೇಕು. ಅವರ ಆಟಕ್ಕೆ ಯಾವ ಸಾಧನ ಸಲಕರಣೆಗಳೂ ಬೇಕಿಲ್ಲ. ಹತ್ತು–ಹದಿನೈದು ಬಾಲ ಬಾಲಕಿಯರು ದುಂಡಗೆ ಸರಪಳಿಯಂತೆ ಕೈ ಕೈ ಹಿಡಿದು ನಿಲ್ಲುತ್ತಾರೆ. ಇಬ್ಬರು ಹಿರಿಮಣಿಗಳಾಗುತ್ತಾರೆ. ಒಬ್ಬಳು ವರ್ತುಲದ (ಗೋಲಾಕಾರದ) ಒಳಭಾಗದಲ್ಲಿ, ಇನ್ನೊಬ್ಬಳು ಹೊರಗೆ ನಿಂತು ಇಬ್ಬರೂ ಎಡಗೈ ಮೇಲೆ ಎತ್ತಿಕೂಡಿಸಿ ಸುತ್ತು ಹಾಕುತ್ತಬಲು ರಾಗವಾಗಿ ಈ ರೀತಿ ಹಾಡುತ್ತಾರೆ.

"ಹಲಗಿ ಒಡ್ಡಾಽ ಹತ್ತೊಂಬಳ್ಳಾ
ನಾಯಿಗಿ ನುಚ್ಚು ಹಾಕಲಿಲ್ಲ
ಜೊಂಯಿ ಜೊಟಕ್
ಎಣ್ಣೀ ತಟಕ್......... ಽ"

ಎಂದು ಹಾಡುತ್ತಾ ವರ್ತುಲದಲ್ಲಿ ನಿಂತು ಒಬ್ಬ ಬಾಲೆಯನ್ನು ಹಿಡಿದು ಹೀಗೆನ್ನುವರು:

ನಿಮ್ಮ ಅವ್ವನ ಕೊಡ್ತಿನಿ ಕೂಡ್ರು
ನಿಮ್ಮ ಅಪ್ಪನ ಕೊಡ್ತಿನಿ ಕೂಡ್ರು
.........................
ಬಂಗಾರಾದಂಥಾ ಗಂಡನ್ನ ಕೊಡ್ತಿನಿ ಕೂಡ್ರು
ಚಿನ್ನದಂಥಾ ಹೆಂಡ್ತೀನ ಕೊಡ್ತಿನಿ ಕೂಡ್ರು

ಎಂದು ಒಂದೊಂದಾಗಿ ಹೇಳುವರು. ನಿಂತವರು ತಮ್ಮ ತಮ್ಮ ಇಷ್ಟದಂತೆ, ಹಿರಿಮಣಿಯಿಂದ ಹೇಳಿಕೆ ಬಂದೊಡನೆ ಕೂಡ್ರುವರು. ಈ ಆಟದಲ್ಲಿ ಬಾಲಕ–ಬಾಲಕಿಯರು ತಮ್ಮ ತಮ್ಮ ಪ್ರೀತಿ ಯಾರ ಮೇಲೆಂಬುದನ್ನು ವ್ಯಕ್ತಪಡಿಸುವರು. ಕೆಲವು ಹುಡುಗರು 'ತಿಂಡಿ ಕೊಡ್ತಿನಿ' ಎಂದಾಗ ಕುಳಿತುಕೊಳ್ಳುವರು. ಈ ಆಟದಲ್ಲಿ ಹೊತ್ತು ಸಾಲದೆ ನಕ್ಕು ನಲಿಯುತ್ತಾರೆ. ಅವರ ಹಾಡು ಹೊನಲಾಗಿ ಹರಿಯುತ್ತದೆ. ಹೆಣ್ಣು–ಗಂಡೆಂಬ ಭೇದ ಸಹ ಈ ಕೂಟದಲ್ಲಿ ಉಂಟಾಗುವುದಿಲ್ಲ.

ಒಬ್ಬನು : 'ನೋಡು ನೋಡು ತಮ್ಮಯ್ಯಽ !
ಎಲ್ಲರೂ : ಲಡ್ಡು ಬಚ್ಚಿ ಎಲ್ಲಿಟ್ಟೀ?

ದುಂಡಗೆ ಕುಳಿತ ಹತ್ತಿಪ್ಪತ್ತು ಎಳೆಯರ ಹಿಂದಿನಿಂದ ಕೈಯಲ್ಲಿ 'ಲಡ್ಡು' ಹಿಡಿದು ಅದನ್ನು ಅಂಗಿಯಲ್ಲಿ ಮುಚ್ಚಿಕೊಂಡು ತಿರುಗುವ ಹಿರಿಮಣಿಯು "ನೋಡು ನೋಡು ತಮ್ಮಯ್ಯಽ !' ಎಂದಾಗ ಎಲ್ಲರೂ: "ಲಡ್ಡು ಬಚ್ಚಿ ಎಲ್ಲಿಟ್ಟೀ? ಎಂದು ಕೇಳುವರು ರಾಗವಾಗಿ. ಕುಳಿತವರು ಹಿಂದೆ ಹೊರಳಿ ನೋಡುವಂತಿಲ್ಲ. ಕಂಡುದನ್ನು ಇನ್ನಾರಿಗೂ ಹೇಳುವಂತಿಲ್ಲ! ಒಬ್ಬನ ಹಿಂದೆ ಲಡ್ಡು ಗುಟ್ಟಾಗಿ ಇಟ್ಟಿದ್ದನ್ನು ಅರಿಯದ ಬಾಲಕನು ಹಿರಿಮಣಿಯಿಂದ ಲಡ್ಡಿನ ಏಟು ಸಹಿಸುತ್ತ ಒಂದು ಸುತ್ತು ಓಡಬೇಕು! ಉಳಿದವರಿಗೆ ಇದು ತುಂಬಾ ಹುರುಪಿನ ಆಟ. ಈ ಆಟದ ಪಲ್ಲವಿಯಂತೆ ಎರಡೇ ಎರಡು ವಾಕ್ಯಗಳು. –

'ಅದಲು ಬದಲು ಕಂಚೀ ಕದಲು
ಇವರು ಬಿಟ್ಟು ಇವರ್ಯಾರು?
ಇದು ಮಕ್ಕಳ 'ಕಣ್ಣು ಮುಚ್ಚಾಲೆ' ಆಟದ ಪಲ್ಲವಿ.

'ಬಿಟ್ಟು ಬಿಟ್ಟು ಬೆಳಗಾಯಿತು
ತಟ್ಟೀ ಮನಿ ಹಾಳಾಯಿತು.
ಹಾಳು ಗೋಡೆಯ ದೆವ್ವ ಬಂದು ಬಡೀತು !'

ಎಂದು ಹಿರಿಮಣಿಯು ಘೋಷಿಸಿದಾಗ ಅಡಗಿದ ಸದಸ್ಯರನ್ನು ಹುಡುಕಲು ನಿಂತ ಹುರಿಯಾಳಿನ ಓಟ ಪ್ರಾರಂಭವಾಗುತ್ತದೆ.

'ಇದೇನು' ಎಂಬ ಪ್ರಶ್ನೆ. 'ಬಟ್ಟು' ಎಂಬ ಉತ್ತರ. 'ಹಾಗಾದರೆ ಹಿಡಿ ನನ್ನ ಜುಟ್ಟು !' ಎಂದು ಓಡುವನು ಒಬ್ಬ ಪ್ರಶ್ನೆ ಕೇಳಿದ ಬಂಟ! ಸಿಕ್ಕರೆ ಅವನ ಗೋಳು ಕುದುರೆಯಾಗಿ ಒಬ್ಬನನ್ನು ಹೊರಲೇಬೇಕು ಇದು ಶಕ್ತಿ ಪ್ರದರ್ಶನದ ಆಟವಾಗಿತ್ತು.

"ಕುರಿಮರಿ ಕೊಳ್ತೀರೇನು ಕುರಿಮರಿ?" ಎಂದು ಪುಟ್ಟ ಮಗುವನ್ನು ಹೊತ್ತು ಹಾಡಿ ಆಡಿಸುವ ಬಾಲೆಗೆ ಸಖಿಯರು ಕೇಳುತ್ತಾರೆ: "ಕೊಳ್ತೀವಿ. ಏನೇನು ಮಾಡ್ತೈತಿ? ಮತ್ತೇನು ಬೇಡ್ತೈತಿ? ಆಗ ಕುರಿಮರಿಯ ಪರಿಚಯ ಹೇಳುತ್ತಾಳೆ:

ನಸಕಿನಾಗಽ ಏಳತೈತಿ
ಹಾಸಿಗ್ಯಾಗಽ ಇಸಿ ಮಾಡತೈತಿ!
ಕುಸು ಕುಸು ಅಂತ ಅಳತೈತಿ
ಬಿಸಿಬಿಸಿ ಹಾಲು ಬೇಡತೈತಿ!

ಕುರಿಮರಿ ಕೊಳ್ತೀರೇನು?

ರೊಟ್ಟಿಬೇಡಿ ಅಳತೈತಿ
ಬುಟ್ಟೀ ತುಂಬಾs ಹೇಸತ್ತೈತಿ! (ನಗೆ)
ಸೊಟ್ಟಮಾರಿ ಪುಟ್ಟಮರಿ
ಚಿಟ್ಟನೆ ಚೀರಿ ಅಳತೈತಿ!

ಕುರಿಮರಿ ಕೊಳ್ತೀರೇನು?

ಕಿಲಕಿಲ ಅಂತಾ ನಗತೈತಿ!
ಚಿಲಚಿಲ ಉಚ್ಚೀ ಹೊಯ್ತೈತಿ!
ಬೆಲ್ಲಾ ಬ್ಯಾಳ ಬೇಡ್ತೈತಿ!
ಒಲ್ಲೆಂದರೂ ಬರ್ತೈತಿ!
ಕುರಿಮರಿ ಕೊಳ್ತೀರೇನು?

ಪುಟ್ಟ ಮಗುವಿನ ಪರಿಚಯ ಮಾಡಿ ಹಾಡುವ ದಿಟ್ಟ ಬಾಲೆಯ ಸುತ್ತು, ಅವಳ ಸಖಿಯರ ಹಿಂಡು ಗಟ್ಟಿಯಾಗಿ ನಗುವಾಗ ಅಳುತ್ತಿರುವ ಮಗುವು ತಾನೂ ನಗುತ್ತದೆ.

ಆನೆ ಬಂತು ಆನೆ !
ಯಾವೂರಾನೆ !
ವಿಜಯನಗರದ ಆನೆ !
ಇಲ್ಲಿಗೇಕೆ ಬಂತು ?
ಹಾದಿ ತಪ್ಪಿ ಬಂತು!
ಹಾದಿಗೊಂದು ದುಡ್ಡು !
ಬೀದಿಗೊಂದು ದುಡ್ಡು
……………………………

**ಆನೆಯಾಡಿಸುವ ಈ ಆಟದಲ್ಲಿ ವಿಜಯನಗರ ಸಾಮ್ರಾಜ್ಯದ ಸಂಪದವು ಸೂರೆಯಾಗಿ ಹಾದಿ ಬೀದಿಯ ಪಾಲಾದ ದುರಂತದ ಐತಿಹಾಸಿಕ ಕತೆಯು ಅಡಕವಾಗಿರುವುದನ್ನು ಗಮನಿಸಬಹುದು.** ಈ 'ಆನೆ ಆಟ'ದ ಪರಿಚಯವಿರದ ಮಕ್ಕಳೇ ಉತ್ತರ ಕರ್ನಾಟಕದಲ್ಲಿಲ್ಲ. ಆಡಿಸುವವರು ಹಿರಿಯರು, ಆನೆಗಳು ಪುಟ್ಟ ಮಕ್ಕಳು.

ಅಡ್ಡs ಗ್ವಾಡಿ ಮ್ಯಾಗs
ಗಿಡ್ಡ ಬಾಳ ಹಣ್ಣು!
ಯಾರ ನುಂಗ್ಯಾರವ್ವs
ಭಾವ ನುಂಗ್ಯನವ್ವs !
ಭಾವನ ಹೊಟ್ಟೆ ಕಡಲಿ !
ನಮ್ಮ ಹೊಟ್ಟೆ ತುಂಬಲಿ !

ಭಾವನನ್ನು ಮೂದಲಿಸಿ ಅಣಕಿಸುವ ಹುಡುಗಿಯರ ಹುಡುಗಾಟದ ಪಲ್ಲವಿ ಇದಾಗಿದೆ.

ಹಾಲು ಕುಡಿಯs ಹಕ್ಕಿ
ನೀರು ಕುಡಿಯುವ ಗುಬ್ಬಿs
ನಮ್ಮ ಬಾಲನ ಉಚ್ಚೀಯ ಕುಡಿಯs... ಮಾವಯ್ಯ
ಎಂದು ಯಾರನ್ನಾದರೂ ಹಾಸ್ಯ ಮಾಡಲು ಸಾಧ್ಯ.

ಹಾಲು ಬೇಡಿ ಅತ್ತಾನs
ಕೋಲ ಬೇಡಿ ಕುಣಿದಾನs
ಮೊಸರು ಬೇಡಿ ಕೆಸರು ತುಳಿದಾನs

ಆದುದರಿಂದ 'ಕಂದಯ್ಯನ ಕುಸುಲಾದ ಗೆಜ್ಜೆ'ಗಳು 'ಕೆಸರಾದ'ವೆಂದು ಹಾಸ್ಯದಲ್ಲಿ ತಾಯಿ ಹಾಡಿ ಆಡಿಸುವಳು. ಈ ಸಮಯದಲ್ಲಿ ಬೀಗರಾದವರಾಗಲಿ, ಮಗುವಿನ ಮಾವಂದಿರಾಗಲಿ ಬಂದರೆ – ತೀರಿತು '..................ನನ್ನ ಕಂದನ ಉಚ್ಚೀಯ ಕುಡಿಯ ಮಾವಯ್ಯ.........' ಎಂದೇ ಹಾಸ್ಯ ಮಾಡುವಳು ತಾಯಿ.

ವಸ್ತು ಮತ್ತು ರಚನೆಗಳ ದೃಷ್ಟಿಯಿಂದಲೂ ಕೂಡ **ಶಿಶು ಪ್ರಾಸಗಳು** ಒಂದೇ ರೀತಿ ನಾದಗಳನ್ನು ಹೊಂದಿರುತ್ತವೆ.

ಒಬ್ಬೋರ ತಲಿಮ್ಯಾಲೆ
ಗುಬ್ಬಚ್ಚಿ ಕೂತದೆ
ಕಬ್ಬು ತಿನ್ನೊ ಮಕ್ಕಳೆಲ್ಲ
ಹೇಳಬ್ಯಾಡಿ............ ಎಂದು ಆರಂಭವಾಗುತ್ತದೆ.

ಸಮವಯಸ್ಕ ಮಕ್ಕಳೆಲ್ಲಾ ಸೇರಿ ಒಬ್ಬರ ತಲೆಯ ಮೇಲೆ ಕಾಣದಂತೆ ಏನಾದರೂ ವಸ್ತು (ಕಾಗದ, ಹುಲ್ಲು, ಹೂವು ಇತ್ಯಾದಿ) ಇಟ್ಟು ತಮಾಷೆ ಮಾಡುತ್ತಾ ಹೇಳುವ ಹಾಡು ಇದಾಗಿದೆ. ಏನನ್ನೂ ಇಡದೆ ಈ ಹಾಡು ಹೇಳಿ ಎಲ್ಲರೂ ತಮ್ಮ ತಮ್ಮ ತಲೆಯ ಮೇಲೆ ಕೈಯಿಟ್ಟು ಪರೀಕ್ಷಿಸಿಕೊಳ್ಳುವಂತೆ ಮಾಡುವ ಹಾಸ್ಯ ಇದರಲ್ಲಡಗಿದೆ.

ಮಕ್ಕಳು ತಾವಾಗಿ ತಮಗಾಗಿ ತಮ್ಮ ಆನಂದಕ್ಕಾಗಿ ಹಾಡಿದ ಪಾಡಿದ, ಬೆಡಗು ಬಿನ್ನಾಣದ 'ಮಕ್ಕಳ ಜನಪದ ಸಹಿತ್ಯ'ಕ್ಕೆ ಮಿತಿಯೇ ಇಲ್ಲ. ಅದು ಪ್ರಾದೇಶಿಕ ಪರಿಸರ ಸಂಸ್ಕಾರಗಳಿಗೆ ಅನುಗುಣವಾಗಿ ವೈವಿದ್ಯಮಯವಾಗಿಯೂ ವಿಪುಲವಾಗಿಯೂ ಹುಡುಕಿದಷ್ಟು ಸಿಕ್ಕುವುದು.

ಮಕ್ಕಳ ಹಾಡುಗಳ ರಚನೆಯಲ್ಲಿ ವಿನೋದಕ್ಕಾಗಿ ಪ್ರಾಸ ಪ್ರಿಯತೆಗಾಗಿ ಮದುವೆಗೆ ಸಂಬಂಧಿಸಿದ ಕೆಲವು ವಿವರಗಳನ್ನು ಕೊಡುತ್ತಾ ಮುಕ್ತಾಯವಾಗುವ ಶೈಲಿಯ ಹಾಡುಗಳು ಕೆಲವಿವೆ. ಅವುಗಳಲ್ಲಿ ಈ "ಸಣ್ಣಿ ಮದ್ವೆ ಶನಿವಾರ" ತುಂಬಾ ಪ್ರಸಿದ್ಧಿ ಪಡೆದ ಶಿಶು ಪ್ರಾಸವಾಗಿದೆ.

ಕಪ್ಪೆ ಕರ ಕರ
ತುಪ್ಪ ಜನಿ ಜನಿ
ಮಾವಿನ ವಾಟೆ
ಮರದಲಿ ಕ್ವಾಟೆ
ಹದ್ದಿನ ಕೈಲಿ ಸುದ್ದಿ ಕೊಟ್ಟು
ಕಾಗೆ ಕೈಲಿ ಕಂಕಣ ಕಟ್ಟಿ
ಸಣ್ಣಿ ಮದ್ವೆ ಶನಿವಾರ
ಜೋಯಿಸ್ರು ಬತ್ತಾರೆ ಬಾನ್ವಾರ
ಊಟಕೆ ಬನ್ನಿ ಸೋಮವಾರ
ಎಲೆ ಎತ್ತಿ ಮಂಗಳವಾರ
ಕೈತೊಳರಿ ಬುಧವಾರ
ಧಾರೆಗೆ ಬನ್ನಿ ಗುರ್ವಾರ
ಮುಯ್ ತನ್ನಿ ಶುಕ್ರವಾರ
ಸಣ್ಣಿ ಮದುವೆ ಶನಿವಾರ.

ಮಕ್ಕಳಿಗೆ ಮಾವ ಅತ್ಯಂತ ಪ್ರಿಯವಾದ ವ್ಯಕ್ತಿ. ಸಲಿಗೆ ಹೆಚ್ಚಾಗಿರುತ್ತದೆ. ಮುಂಚೆ ಗ್ರಾಮೀಣ ಪ್ರದೇಶಗಳಲ್ಲಿ ಅವಿಭಕ್ತ ಕುಟುಂಬಗಳಲ್ಲಿ ಈತನ (ಮಾವನ) ಸುತ್ತಲೂ ಮಕ್ಕಳು ಒಟ್ಟಾಗುತ್ತಿದ್ದ ದೃಶ್ಯ ತುಂಬ ಮೋಜಿನದಾಗಿರುತ್ತಿತ್ತು. ಕಾಸು, ತಿಂಡಿ, ಹಣ್ಣು, ಮುದ್ದಿನ ಮಾತುಗಳು ಮಾವನಲ್ಲಿಯೇ ಇರುತ್ತವೆ ಎಂಬ ಅಂಶ ಇಲ್ಲಿ ಮಕ್ಕಳ ದೃಷ್ಟಿಯಿಂದ ಮುಖ್ಯವಾಗುತ್ತಿತ್ತು. ನಾಚಿಕೆ – ಭಯ, ಸಂಕೋಚಗಳ ವಾತಾವರಣ ಇದ್ದಾಗ ಅಕ್ಕನಿಗೆ ಸುದ್ದಿಯನ್ನು ಮುಟ್ಟಿಸುವುದು. ಅಕ್ಕನ ಸುದ್ದಿಯನ್ನು ಮಾವನಿಗೆ ತಲುಪಿಸುವುದು, ವಿಚಾರಗಳು ಗುಟ್ಟಾಗಿರಬೇಕೆಂದು ಎರಡು ಕಡೆಯಿಂದಲೂ ಉಪದೇಶ ಬಂದು 'ಲಂಚ' ಸಿಗುವುದು ಮುಂತಾದ ವಿಶೇಷಗಳಿಗೂ ಇಲ್ಲಿ ಅವಕಾಶ ಇರುತ್ತಿತ್ತು. ಮಾವನಾದವನು ಮಕ್ಕಳನ್ನು ಎಷ್ಟೇ ಚೆನ್ನಾಗಿ ನೋಡಿಕೊಂಡರೂ ಏನೇ ತಿಂಡಿ ತಂದುಕೊಟ್ಟರೂ ಸಹ ಮಾವನನ್ನು ರೇಗಿಸುವ ಪದ್ಯಗಳನ್ನು ಹೇಳುವುದನ್ನು ತಪ್ಪಿಸುವುದು ಕಷ್ಟವಾಗುತ್ತಿತ್ತು. ಅಂತಹ ಪದ್ಯ.

ಮಾವ ಮಾವ ಮಲ್ಲೇರಿ
ಮಾವನ ತಿಕ್ಕೆ ಕಲ್ಲೇರಿ
ಕೋಟೆ ಮ್ಯಾಲೊಂದು ಹಕ್ಕಿ
ಡೊಣ್ಣೆ ತಕ್ಕೊಂಡೆ ಇಕ್ಕಿ
ಬಾವ ಬಾವ ಬಂದ
ಬದನೆಕಾಯಿ ತಿಂದ
ಗುದ್ಲಿ ಪೂಜೆ ಮಾಡ್ದ
ಹೆಡ್ತಿ ಕರ್ಕೊಂಡ್ ಓಡ್ದ

ಕಾಗೆ ಕಾಗೆ ಕೌ ಕೌ
ಯಾರ್ ಬತ್ತರೌ?
ಮಾವ ಬತ್ತನೌ
ಮಾವಂಗೇನ್ ಊಟ?
ಬೀಸಾಕಲ್ ಗೂಟ

ಕಪ್ಪೆ ಚಿಪ್ಪೇಲ್ ಮಡ್ಗಿದ್ದಿನ್ ಬುಟ್ಕೊಮಾವ
ಕಾಲ್ಚೊಂಬಲ್ ನೀರ್ ಮಡ್ಗಿದ್ದಿನ್ ಕುಡ್ಕೊಮಾವ
ಗೂಡ್ಲಂದಿಲ್ ಚಾಪೆ ಹಾಸಿದ್ದಿನ ಬಿದ್ಕೊಮಾವ
ಏಳ್ತದ್ದಂಗೆ ರೊಟ್ಟಿ ಕೊಡ್ತಿನ್ ತಿಂದ್ಕೊ ಮಾವ
ತಿರಿಗಿ ನೋಡ್ದಂಗ್ ಊರ್ ಕಡಿಕ್ ಓಡ್ತಿರ್ ಮಾವ

ಇಲ್ಲಿ ಉದಾಹರಿಸಿದ 'ಬದನೆಕಾಯಿ ತಂದ', ಗುಡ್ಲಿಪೂಜೆ ಮಾಡ್ದ' ಎನ್ನುವ ಭಾವನ ಗುಣಗಳನ್ನು ವರ್ಣಿಸುವಲ್ಲಿ ಪೋಲಿತನದ ತುಂಟತನದ ಚುರುಕು ಕಾಣುತ್ತೇವೆ.

ಜನಪದರು ಕೆಲವು ಹೆಸರುಗಳನ್ನು ಕುರಿತು ವಿಚಿತ್ರ ಪ್ರಾಸವನ್ನು ಸೇರಿಸಿ, ಪದ್ಯ ಹೆಣೆದು ಅವರನ್ನು ಕಂಡಾಗ ಹೇಳಿ ಗೋಳು ಹೊಯ್ದು ಕೊಳ್ಳುವುದು ಕೂಡ ಕಾಣುತ್ತೇವೆ. ಮಕ್ಕಳಲ್ಲಿ ವೈಮನಸ್ಸು ಬಂದಾಗ ಅವರ ಹೆಸರಿನಲ್ಲಿ ಪದ್ಯ ಅಥವಾ ಗಾದೆ ರಚಿಸಿ ಅವನನ್ನು ಕೆಣಕುವುದು ಹೀಯಾಳಿಸುವುದು ವಾಡಿಕೆಯಲ್ಲಿತ್ತು. ಕುರುಡ, ಕುಂಟ, ಹೆಳವ, ಕಿವುಡ ಮುಂತಾದ ಹೆಸರುಗಳ ಬಗ್ಗೆ ವಿನೋದಕ್ಕಾಗಿ ಹೇಳುವ, ಎಲ್ಲರೂ ನಗುವ ಸನ್ನಿವೇಶವನ್ನು ಸೃಷ್ಟಿ ಮಾಡುವ ಪದ್ಯಗಳು ಈ ರೀತಿಯಾಗಿವೆ.

ಸಿದ್ದ ಬೊದ್ದ ಬಾವಿಗೆ ಬಿದ್ದ
ಎತ್ತೊಕೊದ್ರೆ ಕಡೀಕೆ ಬಂದ
ಬೆಲ್ಲ ಕೊಟ್ರೆ ಒಲ್ಲೆ ಅಂದ
ಗೂದೆ ಕೊಟ್ರೆ ಗೊಳಕ್ಕನೆ ನುಂಕೊಂಡ
ಕುಳ್ಳ ಕುಳ್ಳ ಕುಟಾಕು
ಸೇರು ಪಾವು ಚಟಾಕು
ಒಂದಾಣಿ ಕೊಡ್ತಿನಿ
ಮದ್ವಾಗು

ದೊಡ್ಡವ್ವ ದೊಡ್ಡವ್ವ ದಂಟು
ಕೋಳಿಕೊದ್ರೆ ಕಂಟು.

ಹೀಗೆ ಮಕ್ಕಳು ತಾವಾಗಿ ತಮಗಾಗಿ ತಮ್ಮ ಆನಂದಕ್ಕಾಗಿ ಹಾಡಿದ ಪಾಡಿದ, ಬೆಡಗು ಬಿನ್ನಾಣದ 'ಮಕ್ಕಳ ಜನಪದ ಸಾಹಿತ್ಯಕ್ಕೆ' ಮಿತಿಯೇ ಇಲ್ಲ. ಅದು ಪ್ರಾದೇಶಿಕ ಪರಿಸರ ಸಂಸ್ಕಾರಗಳಿಗೆ ಅನುಗುಣವಾಗಿ ವೈವಿಧ್ಯಮಯವಾಗಿಯೂ ವಿಪುಲವಾಗಿಯೂ ಹುಡುಕಿದಷ್ಟು ಸಿಕ್ಕುತ್ತವೆ.

ಆದರೆ ಒಂದು ವಿಷಾದದ ಸಂಗತಿಯೆಂದರೆ ಮಕ್ಕಳು ದೂರದರ್ಶನದಲ್ಲಿ ಹಾಗೂ ಮೊಬೈಲನಲ್ಲಿ ಮೂಡಿಬರುವ ಕಾರ್ಟೂನ್‌ಗಳ ದೃಶ್ಯಗಳಿಗೆ ಮಾರುಹೋಗಿ ಜನಪದ ಶಿಶು ಪ್ರಾಸಗಳನ್ನು ಅದರಲ್ಲಿನ ವಿನೋದವನ್ನು ಮರೆಯುತ್ತಿದ್ದಾರೆ ಎಂದು ಹೇಳುವುದು ಈ ಸಂದರ್ಭದಲ್ಲಿ ಉಚಿತ ಎನಿಸುತ್ತದೆ.

## ಆಕರ ಗ್ರಂಥಗಳು


೧) ಸುವರ್ಣ ಜಾನಪದ ಲೇಖನಗಳು
ಈಶ್ವರಚಂದ್ರ ಚಿಂತಾಮಣಿ ಸಂ: ಡಾ.ವೀರಣ್ಣ ದಂಡೆ. ಮತ್ತು ಡಾ. ಶ್ರೀಪಾದ ಶೆಟ್ಟಿ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೨) ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ,
ಲೇ: ಕಾಳೇಗೌಡ ನಾಗವಾರ, ಸಪ್ನ ಬುಕ್ ಹೌಸ, ಬೆಂಗಳೂರು-೦೯

೩) ಜನಪದ ಸಾಹಿತ್ಯ
ಸಂ:ಪಿ.ಕೆ. ಖಂಡೋಬಾ, ಪ್ರಾಸಾರಾಂಗ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ-೦೩

೪) ಜನಪದ ವೈವಿಧ್ಯ ಸಾಹಿತ್ಯ –
ಸಂ.:ವ್ಹಿ.ಎಲ್. ಪಾಟೀಲ, ಪ್ರಸಾರಾಂಗ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೫) ಜಾನಪದ ಸಂವಹನ
ಲೇ:ಪ್ರೊ:ಸೂಗಯ್ಯ ಹಿರೇಮಠ, ಬಸವ ಪ್ರಕಾಶನ, ಗುಲಬರ್ಗಾ –೦೧